# ಶರಣ ಸಂಗಮ





ಎಲ್ಲ ಧರ್ಮದ ನೇತಾರರು ಶಾಂತಿಧೂತರಾಗಿರುವುದರಿಂದ ಸಮಾಜದಲ್ಲಿ ಧರ್ಮದ ದಾಂಧಲೆಗಳು, ಜಾತಿ ಸಂಘರ್ಷಗಳು ಕಡಿಮೆಯಾಗಿವೆ. ಶಾಂತಿ, ಪ್ರೀತಿ ಇದರ ಜೊತೆ ನೀತಿ ಇರಬೇಕು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ನುಡಿದರು.

ನಗರದ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಮತ್ತು ಎಸ್.ಜೆ.ಎಂ. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ ಚಿತ್ರದುರ್ಗ ಇವರ ಸಹಯೋಗದಲ್ಲಿ ನಡೆದ ಶರಣ ಸಂಗಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಶ್ರೀಗಳು ಮಾತನಾಡಿದರು.

ಸಮಾಜದಲ್ಲಿ ಶಾಂತಿ ನೆಲೆಸಬೇಕಾದರೆ ವೈಯಕ್ತಿಕ ಶಾಂತಿ ಸಹನೆ ಬೇಕಾಗುತ್ತದೆ. ವೈಯಕ್ತಿಕ ಶಾಂತಿ ಸಾವಿರಾರು ಜನರಲ್ಲಿ ಸೌಹಾರ್ಧತೆಯನ್ನು ತರುತ್ತದೆ. ಕೆಲವರು ಕ್ಷುಲ್ಲಕ ಕಾರಣಗಳಿಗಾಗಿ ಅಸಹನೆಗೆ ಗುರಿಯಾಗುತ್ತಾರೆ. ಅಂಥವರ ಬದುಕಲ್ಲಿ ಹುಚ್ಚಾಟ, ಬಂಡಾಟ, ಕಚ್ಚಾಟಗಳು ಮುನ್ನೆಲೆಗೆ ಬರುತ್ತವೆ. ನಮ್ಮ ಬದುಕಿನಲ್ಲಿ ನಿಲ್ಲಬೇಕೆಂದರೆ ಶಾಂತಿಯ ಬಗೆಗಿನ ತುಡಿತ, ಶಿವಾನುಭವದ ತುಡಿತ ಬೇಕಿದೆ. ಶರಣ ಸಂಗಮವೂ ಒಂದು ಶಿಕ್ಷಣ. ಇದು ಬದುಕಿನ ಶಿಕ್ಷಣ. ಇದರಿಂದ ಉನ್ನತ ಶಿಕ್ಷಣ ದೊರೆಯುತ್ತದೆ. ಶರಣ ಸಂಗಮಕ್ಕೆ 30 ವರ್ಷಗಳು ಕಳೆದಿವೆ. ಅನುಭಾವದ ಒಲುಮೆ ಶ್ರದ್ಧೆ ಸಾಧನೆಯಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಬಸವಧರ್ಮದಲ್ಲಿ ಶಿವಯೋಗವಿದೆ. ನಮ್ಮದು ಶಿವಯೋಗ. ಇದೊಂದು ಧ್ಯಾನ ಮಾರ್ಗ. ಗಣಮೇಳ ಕಾರ್ಯಕ್ರಮದಲ್ಲಿ ಮುಸ್ಲಿಂರು ಸಹ ಶಿವಯೋಗದಲ್ಲಿ ಪಾಲ್ಗೊಂಡಿದ್ದರು. ಶಿವಯೋಗ ಎಂದರೆ ಶಾಂತಿಯನ್ನು ನೆಲೆಗೊಳಿಸುವುದು. ಶರಣರೆಂದರೆ ಶಿವಯೋಗ ಪ್ರಿಯರು ಮತ್ತು ಶಾಂತಿಪ್ರಿಯರು ಎಂದರು.

ಹರಿಹರ ಆರೋಗ್ಯ ಮಾತೆಯ ಬಸಿಲಿಕದ ಧರ್ಮಗುರು ಡಾ. ಅಂತೋನಿ ಪೀಟರ್ ವೈಯಕ್ತಿಕ ಶಾಂತಿ ಮತ್ತು ವಿಶ್ವಶಾಂತಿ ಕುರಿತು ಮಾತನಾಡುತ್ತ, ಧರ್ಮ ಜಾತಿ ಮುಖ್ಯವಲ್ಲ. ನಮ್ಮಲ್ಲಿ ಶಾಂತಿ ಉಗಮವಾಗುವುದು ತಂದೆ-ತಾಯಿಗಳ ಮೂಲಕ. ಶಾಂತಿಗೂ ದೇವರಿಗೂ ಅವಿನಾಭಾವ ಸಂಬಂಧವಿದೆ. ಮನುಷ್ಯ ತನ್ನ ಹುಟ್ಟು ಬೆಳವಣಿಗೆ, ತೋರುವ ಪ್ರೀತಿ, ಸಂಸ್ಕಾರಗಳ ಮೇಲೆ ಒಳಿತು ಕೆಡುಕಗಳ ಅನಾವರಣವಾಗುತ್ತದೆ. ಮನುಷ್ಯ-ಮನುಷ್ಯನ ನಡುವೆ ಬಾಂಧವ್ಯವಿದ್ದರೆ ನಮಗೆ ಶಾಂತಿ ದೊರೆಯುತ್ತದೆ ಎಂದು ಹೇಳಿದರು.

ದ್ವೇಷವಿದ್ದ ಕಡೆ ಪ್ರೀತಿ ಹುಟ್ಟಬೇಕು. ನಾವು ನಮ್ಮನ್ನು ಶಾಂತಿಯ ಧೂತರನ್ನಾಗಿ ಮಾಡಬೇಕು. ಮಾನವ ಸಂಬಂಧಗಳಿಂದ ಶಾಂತಿ ಒಳಗೊಳ್ಳಲು ಸಾಧ್ಯ. ಯುದ್ಧ ಇಲ್ಲದಿರುವುದೇ ಶಾಂತಿ. ಕುಟುಂಬದಲ್ಲಿ ಶಾಂತಿ ಇದ್ದರೆ ಊರು, ರಾಜ್ಯ, ರಾಷ್ಟ್ರದಲ್ಲಿ ಶಾಂತಿ ನೆಲೆಗೊಳ್ಳುತ್ತದೆ. ಕುವೆಂಪು ಹೇಳುವಂತೆ ಸರ್ವಜನಾಂಗದ ಶಾಂತಿಯ ತೋಟವಾಗಬೇಕು. ಮನುಷ್ಯ ನಂಬಿರುವ ವಿಚಾರಧಾರೆಗಳಿಂದ ಪ್ರಬುದ್ಧನಾದಾಗ ನಮ್ಮ ನಾಡು ಶಕ್ತಿಯ ಕೇಂದ್ರವಾಗುತ್ತದೆ. ಮೊದಲು ಅಂತರಂಗ ಶುದ್ಧಿಯಾಗಬೇಕು ನಂತರ ಬಹಿರಂಗ ಶುದ್ಧಿ ಸಾಧ್ಯ ಎಂದರು.

ಇದೇ ಸಂದರ್ಭದಲ್ಲಿ ಮಾಜಿ ಸೈನಿಕರೂ ಮತ್ತು ಉಪವಾಣಿಜ್ಯ ತೆರಿಗೆ ಆಯುಕ್ತರಾಗಿ ನೇಮಕಗೊಂಡಿರುವ ರಂಗನಾಥ್ ಎಂ. ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.